ಸಂಖ್ಯೆ ಟಿಯುಡಿಎ / ಎಲ್‌ಎಒ / **84** / 2008-09
1532

ದಿನಾಂಕ : 25-02-2009

**ಶ್ರೀ ಗಂಗಹನುಮಯ್ಯ**
ಮತ್ತು ಇತರರು
'ಮಾರುತಿ ಸದನ',
ವಿ.ಆರ್.ಕಾಲೋನಿ,
ತುಮಕೂರು.

**ಮಾನ್ಯರೆ,**

**ವಿಷಯ :** ತುಮಕೂರು ನಗರದ **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **106, 107, 110** ರಲ್ಲಿ ಒಟ್ಟು **9 ಎಕರೆ 16.12 ಗುಂಟೆ** ವಿಸ್ತೀರ್ಣದ ಪ್ರದೇಶದಲ್ಲಿ ಪ್ರಾಧಿಕಾರದಿಂದ ಅನುಮೋದಿಸಿರುವ ಬಡಾವಣೆಯ ಶೇಕಡ 60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ :** 1. ನಿಮ್ಮ ಅರ್ಜಿ ದಿನಾಂಕ **03-12-2008**
2. ಪ್ರಾಧಿಕಾರಕ್ಕೆ ಉತ್ತಮತೆ ಶುಲ್ಕ ರಸೀದಿ ಸಂಖ್ಯೆ **18381 ರೂ.47,536-00** (ನಲವತ್ತೇಳು ಸಾವಿರದ ಐದು ನೂರ ಮೂವತ್ತ ಆರು ರೂಪಾಯಿಗಳು ಮಾತ್ರ) ದಿನಾಂಕ **03-02-2009**
3. ಪ್ರಾಧಿಕಾರದ ಸಭೆಯ ದಿನಾಂಕ **13-01-2009** ರ ವಿಷಯ ಸಂಖ್ಯೆ **04**

* * * * *

ವಿಷಯಕ್ಕೆ ಸಂಬಂಧಿಸಿದಂತೆ, ನೀವು ನೀಡಿರುವ ಅರ್ಜಿಯನ್ನು ಪರಿಶೀಲಿಸಲಾಗಿ, ಅನುಮತಿ ನೀಡುವ ಸಂಬಂಧ ಪಾವತಿಸಿದ ಶುಲ್ಕಗಳನ್ನು ಪರಿಗಣಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(1) ರನ್ವಯ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ರ ನಿಯಮದಂತೆ ಈ ಕೆಳಕಂಡ ಷರತ್ತುಗಳೊಂದಿಗೆ ನಕ್ಷೆಯನ್ನು ಅನುಮೋದಿಸಲಾಗಿದೆ.

1. ಈಗ ನೀಡಿರುವ ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರಿಶೀಲನೆಗಾಗಿ ತಿಳಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ವಿನ್ಯಾಸಕ್ಕೆ ಅಂತಿಮ ಅನುಮೋದನೆ ಪಡೆಯತಕ್ಕದ್ದು.
3. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 18 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯು ಯಾವ ಸೂಚನೆಯೂ ಇಲ್ಲದೆ ತಂತಾನೆ ರದ್ದಾಗುತ್ತದೆ.

- 2 -

4. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ಼ಾ ಟ್ರೀಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ 21-11-2005 ರ ಪತ್ರ ಸಂಖ್ಯೆ 217/KSPCB/RO-BNG(S-II)CFE/-2005-2006/5361 ಷರತ್ತುಗಳನ್ನು ತಪ್ಪದೇ ಅನುಸರಿಸತ್ತಕ್ಕದ್ದು.
5. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹಾಗೂ ಉದ್ಯಾನವನಗಳಲ್ಲಿ ಹೊಸ ಸಸ್ಯಗಳನ್ನು ಬೆಳೆಸುವುದು.
6. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್‌ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
7. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆಗಳು, ಉದ್ಯಾನವನವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು ಹಾಗೂ ಸಾರ್ವಜನಿಕ ಸೌಲಭ್ಯಕ್ಕೆ ಕಾಯ್ದಿರಿಸಿರುವ ಪ್ರದೇಶಗಳನ್ನು ಒತ್ತುವರಿಯಾಗದಂತೆ ಸಂರಕ್ಷಿಸತ್ತಕ್ಕದ್ದು.
8. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯ ಕೂಡಲೇ ರದ್ದಾಗುವುದು.
9. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕ ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
10. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
11. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
12. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ.
13. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
14. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot Path) ನಿರ್ಮಿಸುವುದು.
15. ಅರ್ಜಿದಾರರ ಮನವಿಯಂತೆ ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ / 112 / ಬೆಂರೂಪ್ರಾ / 2005 ದಿನಾಂಕ 26-05-2005 ರಲ್ಲಿನ ಮಾರ್ಗಸೂಚಿಯಂತೆ ಈ ಕೆಳಕಂಡ ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ವಿಸ್ತೀರ್ಣ | ನಿವೇಶನಗಳ ಸಂಖ್ಯೆ | ಒಟ್ಟು |
|---|---|---|---|
| 1. | 30X40 | 32 to 48, 51 tp 63, 66 to 78, 81 to 97, 104 to 129, 143 to 167 | 111 |
| | | ಒಟ್ಟು | 111 |

ತಮ್ಮ ನಂಬುಗೆಯ,

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಪ್ರತಿಯನ್ನು

1. ಆಯುಕ್ತರು, ನಗರ ಸಭೆ, ತುಮಕೂರು ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ರವರಿಗೆ ನಕ್ಷೆಯೊಂದಿಗೆ ಕಳುಹಿಸಿದೆ.




LAND USE ANALYSIS

| USE | AREA IN SFT | % |
|---|---|---|
| RESIDENTIAL | 225400.00 | 54.94 |
| PARK | 42108.25 | 10.26 |
| CA | 13562.50 | 3.30 |
| ROADS | 129210.00 | 31.50 |
| TOTAL | 410280.75 | 100.00 |

SCALE 1" = 50'0"

57+54+59+17+6+10+18+17 = 238

= 240 = 1440m

Park: 45+25= 70×6= 425m

# GOVERNMENT OF KARNATAKA

TUMKUR URBAN DEVELOPMENT AUTHORITY

TUMKUR

TOWN PLANNING MEMBER
T.U.D.A
TUMKUR

COMMISSIONER
T.U.D.A
TUMKUR

| DRN BY | CKD BY | DRG No |
|---|---|---|

TITLE: PROPOSED RESIDENTIAL LAY OUT PLAN IN SY No 106, 107, AND 110 OF TUMKUR AMANIKERE TUMKUR



EXST ROAD
PROPOSED 9M ROAD
PROPOSED
PROPOSED 9M ROAD
PROPOSED
PROPOSED 9M ROAD
PROPOSED
9M ROAD
9M ROAD
ROAD
AGRICULTURE LAND
AGRIC
30'0" x 40'0"
30'0" x 40'0"
30'0" x 40'0"
30 x 40
30 x 40
155'0"
85'0"
90'
C.A
PARK
81'
85'
150'
250m